# ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ, ನವಲಗುಂದ.

| | |
|---|---|
| ಸಿ.ಸಿ. ನಂಬರ್ | : 102/2024 |
| ಸಿ.ಡಬ್ಲೂ | : 05 |
| ಪಿ.ಡಬ್ಲೂ | : 03 |
| ಸಾಕ್ಷಿಯ ಹೆಸರು | : ಸುನಂದಾ ಹನಮಂತ ಯಡಹಳ್ಳಿ |
| ವಯಸ್ಸು | : 53 ವರ್ಷ |
| ಉದ್ಯೋಗ | : ಮನೆಗೆಲಸ |
| ವಾಸ ಸ್ಥಳ | : ಕರ್ಲವಾಡ. |

ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 10.04.2026.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-**

ಪ್ರಕರಣದ ಆರೋಪಿತರ ಪರಿಚಯವಿದೆ. ಚಾಸಾ-1 ರವರು ನನ್ನ ಅಕ್ಕ. ಚಾಸಾ-4 ನನ್ನ ಮಗ. ಚಾಸಾ-6 ನನ್ನ ಮಾವ. ಚಾಸಾ-7 ಮತ್ತು 8 ರವರ ಪರಿಚಯ ಇದೆ.

ದಿನಾಂಕಃ 10-07-2021 ರಂದು ಬೆ.09.00 ಗಂಟೆಗೆ ಕರ್ಲವಾಡ ಗ್ರಾಮದ ನಮ್ಮ ಮನೆಯ ಮುಂದೆ ಮುಸರಿ ಚೆಲ್ಲುವ ವಿಷಯ ಸಂಬಂಧಿಸಿ ನಮಗೂ ಮತ್ತು ಆರೋಪಿತರಿಗೂ ಜಗಳವಾಗಿರುತ್ತದೆ. 1 ನೇ ಆರೋಪಿ ನನಗೆ ಬೋಸಡಿ ಹಾಗೂ ಹಾದರಗಿತ್ತಿ ಎಂದು ಅವಾಚ್ಯವಾಗಿ ಬೈದಿರುತ್ತಾರೆ. 3 ನೇ ಆರೋಪಿ ಚಾಸಾ-4 ರವರಿಗೆ ಬಡಿಗೆಯಿಂದ ದುಬ್ಬಕ್ಕೆ ಹೊಡೆದಿರುತ್ತಾನೆ. ಜಗಳ ಬಿಡಿಸಲು ಬಂದ ಚಾಸಾ-1 ರವರಿಗೆ 3 ನೇ ಆರೋಪಿ ಅವಾಚ್ಯವಾಗಿ ಬೈದಿರುತ್ತಾನೆ. ಆರೋಪಿತರು ಚಾಸಾ-1 ರವರನ್ನು ಹಿಡಿದು ಎಳೆದಾಡಿರುತ್ತಾರೆ. ಜಗಳ ಬಿಡಿಸಲು ಹೋದ ನನಗೆ ಆರೋಪಿತರು ಹೊಡೆಬಡೆ ಮಾಡಿರುತ್ತಾರೆ. ಪ್ರಕರಣಕ್ಕೆ ಸಂಬಂದಿಸಿ ನಾನು ಪೋಲಿಸರಿಗೆ ಯಾವುದೇ ಹೇಳಿಕೆಗಳನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ- ಮಾನ್ಯ ಸ.ಸ.ಅ. ರವರಿಂದಃ**

ದಿಃ 10.07.2021 ರಂದು ಬೆ.09.00 ಗಂಟೆಗೆ ಚಾಸಾ-1 ರವರು ನಮ್ಮ ಮನೆಯ ಹಿತ್ತಲಲ್ಲಿ ಮುಸುರಿ ಚೆಲ್ಲಿದ್ದರ ಸಿಟ್ಟಿನಿಂದ ಆರೋಪಿತರು ಅಕ್ರಮಕೂಟವನ್ನು ರಚಿಸಿಕೊಂಡು ಬಂದು 1 ನೇ ಆರೋಪಿ ಚಾಸಾ-1 ರವರಿಗೆ ಭೋಸಡಿ ಎಂದು ಅವಾಚ್ಯವಾಗಿ ಬೈದಿರುತ್ತಾರೆ ಎಂದರೆ ಸರಿ. ಅದನ್ನು ಪ್ರಶ್ನಿಸಿದ ಚಾಸಾ-4 ರವರಿಗೆ 2 ಮತ್ತು 3 ನೇ ಆರೋಪಿತರು ಹೊಡೆಬಡೆ ಮಾಡಿದ್ದು, 3 ನೇ ಆರೋಪಿ ಬಡಿಗೆಯಿಂದ ಆತನ ದುಬ್ಬಕ್ಕೆ ಹೊಡೆದಿದ್ದು, 2 ನೇ ಆರೋಪಿ ಕೈಯಿಂದ ಆತನ ಕಪಾಳಕ್ಕೆ ಹಾಗೂ ತಲೆಗೆ ಹೊಡೆದು ಸಾದಾ ಗಾಯಪಡಿಸಿರುತ್ತಾರೆ ಎಂದರೆ ಸರಿ. ನಂತರ ಜಗಳ ಬಿಡಿಸಲು ಬಂದ ಚಾಸಾ-1 ರವರಿಗೆ ಕೈಹಿಡಿದು ಎಳೆದಾಡಿದ್ದು, 4 ನೇ ಆರೋಪಿ ಕೈಯಿಂದ ಹೊಡೆಬಡೆ ಮಾಡಿ ಕಾಲಿನಿಂದ ಒದ್ದು, ಸಾದಾ ಗಾಯಪಡಿಸಿರುತ್ತಾರೆ ಎಂದರೆ ಸರಿ. ನಂತರ ಜಗಳ ಬಿಡಿಸಲು ಬಂದ ನನಗೆ 4 ನೇ ಆರೋಪಿ ನೆಲಕ್ಕೆ ಕೆಡವಿ ಗಾಯ ಪಡಿಸಿ ಜೀವ ಬೆದರಿಕೆ ಹಾಕಿರುತ್ತಾನೆಂದರೆ ಸರಿ. ನಂತರ ನಾನು, ಚಾಸಾ-1 ಮತ್ತು 4 ರವರು ನವಲಗುಂದ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತೇವೆ ಎಂದರೆ ಸರಿ. ಈ ಮೇಲಿನಂತೆ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ ಎನ್ ವಾಯ್ ಎಚ್ ವಕೀಲರಿಂದಃ**

ನಾನು ಹಾಗೂ ಚಾಸಾ-1 ರವರು ಸೇರಿ ಆಸ್ತಿಯ ಕುರಿತು 1 ನೇ ಆರೋಪಿಯ ವಿರುದ್ಧ ಸಿವಿಲ್ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಸದರಿ ದಾವೆ ವಿಚಾರಣೆಗಾಗಿ ಚಾಲ್ತಿಯಲ್ಲಿದೆ ಎಂದರೆ ಸರಿ. ದೂರನ್ನು ಚಾಸಾ-1 ರವರು ಸಲ್ಲಿಸಿರುತ್ತಾರೆ. ನಾನೂ ಸಹ ದೂರನ್ನು ನೀಡಿರುತ್ತೇನೆ. ಘಟನೆಯಾದ ದಿನ ದೂರನ್ನು ಸಲ್ಲಿಸಿರುತ್ತೇವೆ. ನಿಪಿ-1 ನ್ನು ಸಲ್ಲಿಸುವ ವೇಳೆ ನಾನೂ ಸಹ ಹಾಜರಿದ್ದೆ. ಸದರಿ ಅಂಶವನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದಿನಾಂಕಃ 10-07-2021 ರಂದು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸದರಿ ದಿನಾಂಕವನ್ನು ಹೊರತು ಪಡಿಸಿ ದಿನಾಂಕಃ 13-07-2021 ರಂದು ಪೋಲೀಸ ಠಾಣೆಗೆ ಹೋಗಿರುತ್ತೇನೆ. ಚಾಸಾ-1 ರವರು ಆರೋಪಿತರೊಂದಿಗೆ ರಾಜೀಯಾಗಿರುತ್ತಾರೆ ಎಂದರೆ ಸರಿ. ಇತ್ತಿಚೆಗೆ 2 ಮತ್ತು 3 ನೇ ಆರೋಪಿತರ ಮದುವೆಯಾಗಿರುತ್ತದೆ ಎಂದರೆ ಸರಿ. ಸದರಿ ಮದುವೆಗೆ ನನ್ನನ್ನು ಕರೆಯದ ಕಾರಣ ಸುಳ್ಳು

ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಅವಾಚ್ಯವಾಗಿ ಬೈದಿರುತ್ತಾರೆ, ಹೊಡೆಬಡೆ ಮಾಡಿರುತ್ತಾರೆ, ಜೀವದ ಬೆದರಿಕೆ ಹಾಕಿರುತ್ತಾರೆ, ಅವಮಾನ ಪಡಿಸಿರುತ್ತಾರೆ ಹಾಗೂ ಕೆಳಗೆ ಬಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ. ಇದೆ.**

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ**

**ನವಲಗುಂದ.**